

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಾಗರದಾಚೆಯ ದುಂಬಿಗಳು

‘ಕೋಶನಾದರೂ ಓದಬೇಕು, ದೇಶನಾದರೂ ತಿರುಗಬೇಕು’ ಎಂಬ ಗಾದೆ ಮಾತನ್ನು ನೀವು ಕೇಳಿದ್ದೀರಿ. ಇಲ್ಲಿ ‘ಕೋಶ’ ಎಂದರೆ ಬರೀ ‘ಶಬ್ದಕೋಶ’ (Dictionary) ಅಲ್ಲ. ಒಂದು ಒಳ್ಳೆಯ ಪುಸ್ತಕ ಎಂದರ್ಥ. ಶಬ್ದಕೋಶವನ್ನು ಯಾರೂ ಕಾದಂಬರಿಯಂತೆ ಮೊದಲಿನಿಂದ ಕೊನೆಯ ಪುಟದವರೆಗೆ ಓದುವುದಿಲ್ಲ. ಪುಸ್ತಕದ ಓದು ಮತ್ತು ದೇಶದ ಪರ್ಯಟನೆ ಇವೆರಡೂ ಜ್ಞಾನಾರ್ಜನೆಯ ಸಾಧನಗಳು. ಗಾದೆ ಮಾತಿನ ಪ್ರಕಾರ ಇವೆರಡರಲ್ಲಿ ಯಾವುದೇ ಒಂದನ್ನು ಮಾಡಿದರೂ ಜ್ಞಾನಾರ್ಜನೆಯಾಗುತ್ತದೆ. ಇವುಗಳಲ್ಲಿ ಯಾವುದು ಮೊದಲು ಯಾವುದು ನಂತರ ಎಂದು ಗಾದೆ ಹೇಳದಿದ್ದರೂ ‘ಕೋಶ’ ಎಂಬ ಶಬ್ದವನ್ನು ಮೊದಲು ಬಳಸಿರುವುದರಿಂದ ಓದೇ ಮೊದಲು ಎಂದು ಊಹಿಸಬಹುದಾಗಿದೆ. ಶಬ್ದಗಳಿಲ್ಲದೆ ಕೋಶವಿಲ್ಲ. ಮನುಷ್ಯನ ಆಲೋಚನೆಗಳ ಬಾಹ್ಯ ಅಭಿವ್ಯಕ್ತಿಯೇ ಶಬ್ದ. ಶಬ್ದ ಮತ್ತು ಅರ್ಥದ ಸಂಬಂಧವನ್ನು ಗ್ರಹಿಸುವಂತೆ ಮಾಡುವುದೇ ಕೋಶ. ಶಬ್ದಾರ್ಥ ಗ್ರಹಿಕೆಯೇ ಜ್ಞಾನ (ಶಾಬ್ದಬೋಧ). ಕರ್ಣಗೋಚರ ಶಬ್ದ; ದೃಷ್ಟಿಗೋಚರ ಅಕ್ಷರ. ಅಂದರೆ ಒಂದು ನಿರ್ದಿಷ್ಟ ಅರ್ಥವನ್ನು ಸಂಕೇತಿಸುವ ಧ್ವನಿಯ ತರಂಗಗಳಿಂದ ಕೂಡಿದ ಶಬ್ದವು ಕರ್ಣಗೋಚರವಾದರೆ ಅದೇ ಶಬ್ದ ಅಕ್ಷರರೂಪವಾಗಿ ಮೈದಾಳಿದಾಗ ದೃಷ್ಟಿಗೋಚರವಾಗುತ್ತದೆ. ಹೀಗೆ ಕರ್ಣಗೋಚರವಾದ ಅನೇಕ ಶಬ್ದಗಳ ಜೋಡಣೆಯಿಂದ ಉಂಟಾಗುವ ವಿಚಾರಗಳನ್ನೊಳಗೊಂಡ ಅಕ್ಷರ ರೂಪ ಬರಹವೇ ಪುಸ್ತಕ.

ಓದು ಮತ್ತು ಪರ್ಯಟನೆ ಪರಸ್ಪರ ಪೂರಕ. ಓದು ಪರ್ಯಟನೆಗೆ ದಾರಿಮಾಡಿಕೊಡಬಹುದು; ಪರ್ಯಟನೆ ಓದಿಗೆ ಪ್ರೇರೇಪಣೆಯಾಗಬಹುದು. ಇವೆರಡಕ್ಕೂ ಮುಖ್ಯವಾಗಿ ಬೇಕಾಗಿರುವುದು ಜ್ಞಾನದ ತೃಷೆ. ‘ಉಣ್ಣೆ ಕೆಚ್ಚಲೊಳಿರ್ದು ಉಣ್ಣದುದು ನೊರೆವಾಲ’ ಎಂಬಂತೆ ಜ್ಞಾನದ ದಾಹವಿಲ್ಲದವನಿಗೆ ಮನೆಯಲ್ಲಿ ಪುಸ್ತಕಗಳಿದ್ದೂ ಪ್ರಯೋಜನವಿಲ್ಲ. ಹೆಚ್ಚೆಂದರೆ ಅವು ಮನೆಯ ಶೋಕೇಸಿನಲ್ಲಿರುವ ಇತರೆ ಆಲಂಕಾರಿಕ ವಸ್ತುಗಳಂತೆ ಆಗಿಬಿಡುತ್ತವೆ. ಅದೇ ರೀತಿ ಪರ್ಯಟನೆ ಮಾಡುವವನಿಗೆ ಒಂದು ನಿರ್ದಿಷ್ಟ ಉದ್ದೇಶವಿರಬೇಕು. ಇಲ್ಲದಿದ್ದರೆ ಅದು ಅಲೆಮಾರಿಯಂತೆ ಬರೀ ತಿರುಗಾಟವಾಗಿ ವ್ಯರ್ಥ ದೈಹಿಕ ಶ್ರಮವಾಗುತ್ತದೆ.

ಪ್ರವಾಸಕಾಲದಲ್ಲಿ ಸಾಕಷ್ಟು ಹೊಸ ಅನುಭವಗಳು ಉಂಟಾದರೂ ಅವುಗಳನ್ನು ಬರಹದಲ್ಲಿ ದಾಖಲಿಸಲು ಬೇಕಾದ ಕಾಲಾವಕಾಶವಿರುವುದಿಲ್ಲ. ಆದಕಾರಣ ಹಿಂದಿನ ಅನುಭವದ ಹಿನ್ನೆಲೆಯಲ್ಲಿ ಈ ಬಾರಿ ಸಿರಿಗೆರೆಯಿಂದ ಅಮೇರಿಕೆಗೆ ಹೊರಡುವಾಗ ಪ್ರವಾಸಕ್ಕೆ ಬೇಕಾದ ಸಾಮಗ್ರಿಗಳನ್ನು ಜೋಡಿಸಿಕೊಳ್ಳುವುದರ ಜೊತೆಗೆ ಎರಡು ವಾರಗಳ ಅಂಕಣ ಬರಹಕ್ಕೆ ಬೇಕಾದ ಟಿಪ್ಪಣಿಗಳನ್ನು ಮಾಡಿಕೊಂಡು ಬಂದಿದ್ದರೂ ಇಲ್ಲಿಯ ತಾಜಾ ವಿಷಯಗಳನ್ನು ಕುರಿತು ಬರೆಯದಿದ್ದರೆ ಓದುಗರಿಗೆ ತೃಪ್ತಿಯಾಗುವುದಿಲ್ಲವೆಂಬ ಅರಿವು ನಮ್ಮನ್ನು ಕಾಡಿಸುತ್ತಿತ್ತು. ಅದರ ಪರಿಣಾಮವೇ ಮೊನ್ನೆ ನ್ಯೂಯಾರ್ಕಿನಿಂದ ಲಂಡನ್‌ವರೆಗೆ ಕೈಗೊಂಡ ಸುದೀರ್ಘ ವಿಮಾನಯಾನದಲ್ಲಿ ಸಿದ್ಧಗೊಂಡ ಈ ಲೇಖನ.

ಕೆಲವು ವರ್ಷಗಳ ಹಿಂದೆ ವಿಮಾನದಲ್ಲಿ ಪ್ರಯಾಣಿಸುವಾಗ ಸಹಪ್ರಯಾಣಿಕರ ಎದುರಿಗೆ ನಮ್ಮ ಬಳಿ ಇರುವ laptop ತೆರೆದು ಬರೆಯಲು ತೊಡಗುವುದು ಒಂದು ರೀತಿಯ ಮುಜುಗರ ಎನಿಸುತ್ತಿತ್ತು. ಅಲ್ಲದೆ ಪೈಲೆಟ್‌ನಿಂದ ನಿಷೇಧಾಜ್ಞೆ ಬೇರೆ. ವಿಮಾನದ take off ಮತ್ತು landing ಸಮಯದಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳಿಂದ ವೈಮಾನಿಕ ಚಾಲನೆಗೆ ಅಡೆತಡೆಯುಂಟಾಗುತ್ತದೆ. ಆದರೆ ವಿಮಾನ ಆಕಾಶದಲ್ಲಿ cruising level (ಸುಮಾರು 40 ಸಾವಿರ ಅಡಿ ಎತ್ತರ) ಮುಟ್ಟಿ ಸಲೀಸಾಗಿ ಹಾರಾಡುತ್ತಿರುವ ಸಂದರ್ಭದಲ್ಲಿ ಲ್ಯಾಪ್‌ಟಾಪ್ ಬಳಸಲು ಪೈಲೆಟ್ ಆಕ್ಷೇಪಣೆ ಇಲ್ಲ. ಈಗ ಬಹುತೇಕ ಅಂತಾರಾಷ್ಟ್ರೀಯ ವಿಮಾನಯಾನಗಳಲ್ಲಿ laptop ಇಲ್ಲದ ಪ್ರಯಾಣಿಕರೇ ಇಲ್ಲ. ವಿಮಾನ ಆಗಸಕ್ಕೆ ಏರುತ್ತಿದ್ದಂತೆಯೇ ಲ್ಯಾಪ್‌ಟಾಪನ್ನು ತಮ್ಮ ತೊಡೆಯ ಮೇಲೆ ಮಗುವಿನಂತೆ ಕೂರಿಸಿಕೊಂಡು ತಲ್ಲೀನರಾಗಿಬಿಡುತ್ತಾರೆ. ಪ್ರಥಮದರ್ಜೆ/ಬ್ಯುಸಿನೆಸ್ ಕ್ಲಾಸ್‌ನಲ್ಲಿ ಪ್ರಯಾಣಿಸುವವರಿಗೆ ವಿಮಾನವೇ ಅವರ ಕಾರ್ಯಾಲಯವಾಗಿಬಿಡುತ್ತದೆ. ಪಕ್ಕದಲ್ಲಿ ಕುಳಿತಿರುವವರನ್ನು ಕಣ್ಣೆತ್ತಿಯೂ ಸಹ ನೋಡದೆ ತಮ್ಮ ವ್ಯವಹಾರಗಳಲ್ಲಿ ಮಗ್ನರಾಗಿಬಿಡುತ್ತಾರೆ.

ಇತ್ತೀಚೆಗೆ ಲ್ಯಾಪ್‌ಟಾಪ್‌ಗಳಿಗಿಂತ ಐ-ಪ್ಯಾಡ್‌ಗಳ ಆಕರ್ಷಣೆ ಹೆಚ್ಚಾಗುತ್ತಿದೆ. ಕಳೆದ ವಾರ ಸ್ಯಾನ್ ಫ್ರಾನ್ಸಿಸ್ಕೋದಿಂದ ನ್ಯೂಯಾರ್ಕಿಗೆ ಅಮೇರಿಕನ್ ಏರ್‌ಲೈನ್ಸ್‌ನಲ್ಲಿ ಪ್ರಯಾಣಿಸುವಾಗ ಮನರಂಜನೆಗಾಗಿ ಗಗನಸಖಿ ಪ್ರಯಾಣಿಕರೆಲ್ಲರಿಗೂ ಒಂದೊಂದು ಐ-ಪ್ಯಾಡ್ ತಂದು ಕೊಟ್ಟದ್ದು ಅದರ ಜನಪ್ರಿಯತೆಯ ದ್ಯೋತಕ. ಇಲ್ಲಿಯ ಮಕ್ಕಳಿಗೂ ಐ-ಪ್ಯಾಡ್ ಮೇಲೆ ಬಹಳ ಹುಚ್ಚು. ಬೊಂಬೆಗಳೊಂದಿಗೆ ಆಡುವುದಕ್ಕಿಂತ ಐ-ಪ್ಯಾಡ್‌ನೊಂದಿಗೆ ಆಡುವುದೇ ಹೆಚ್ಚು. ಮೊನ್ನೆ ನಮ್ಮ ದರ್ಶನಕ್ಕೆಂದು ಬಂದಿದ್ದ ಯುವದಂಪತಿಗಳ 2 ವರ್ಷದ ಮಗು ‘ಐ..ಪ್ಯಾ..ಡ್’ ಎಂದು ತೊದಲಿಸುತ್ತಾ ನಮ್ಮ ಕೈಯಲ್ಲಿದ್ದುದನ್ನು ಬೆರಳು ಮಾಡಿ ತೋರಿಸಿದ್ದು ಎಲ್ಲರಿಗೂ ಅಚ್ಚರಿಯನ್ನುಂಟುಮಾಡಿತು. ಮಗು ಹತ್ತಿರ ಬಂದು ಅದರ ಮೇಲೆ ಕೈಯಾಡಿಸಿದ್ದು ಇನ್ನೂ ವಿಸ್ಮಯಕಾರಿಯಾಗಿತ್ತು. ಭವಿಷ್ಯದಲ್ಲಿ ಇಲ್ಲಿಯ ಮಕ್ಕಳು ಶಾಲೆಗೆ ಕೈಯಲ್ಲಿ ಪುಸ್ತಕದ ಬದಲು ಐ-ಪ್ಯಾಡ್ ಹಿಡಿದುಕೊಂಡು ಹೋಗುವ ದಿನಗಳು ಬಹಳ ದೂರ ಇಲ್ಲ. ಅವರು ಓದಬೇಕಾದ ಪುಸ್ತಕಗಳೆಲ್ಲವೂ ಈಗ ಐ-ಪ್ಯಾಡ್‌ನಲ್ಲಿ ಲಭ್ಯ. ಶಾಲೆಗಳಿಗೆ ಪುಸ್ತಕ ಸರಬರಾಜು ಮಾಡಲು ಒದ್ದಾಡುತ್ತಿರುವ ನಮ್ಮ ಶಿಕ್ಷಣ ಮಂತ್ರಿ ಕಾಗೇರಿಯವರು ಇತ್ತ ಗಮನ ಹರಿಸುವುದು ಒಳ್ಳೆಯದು. ಪಾಪ! ನಮ್ಮ ಹಳ್ಳಿಯ ಮಕ್ಕಳಿಗೆ

- 2 -

ಸ್ಲೇಟು ಬಳಪವೇ ಗತಿ! ಆದರೂ ನಮ್ಮ ದೇಶದ ಮಕ್ಕಳು ಬುದ್ಧಿವಂತರು. ಅವರಿಗೇನಾದರೂ ಐ-ಪ್ಯಾಡ್ ನಂತಹ ತಾಂತ್ರಿಕ ಸೌಲಭ್ಯವನ್ನು ಒದಗಿಸಿಕೊಟ್ಟರೆ ಓದುವುದರಲ್ಲಿ ಅಮೇರಿಕೆಯ ಮಕ್ಕಳನ್ನು ಮೀರಿಸಬಲ್ಲರು.

ಇಲ್ಲಿ ನೆಲೆಸಿರುವ ಭಾರತೀಯ ಸಂಜಾತ ಮಕ್ಕಳೇ ಇದಕ್ಕೆ ಸಾಕ್ಷಿ. ಪ್ರತಿವರ್ಷ ರಾಷ್ಟ್ರಮಟ್ಟದಲ್ಲಿ ನಡೆಯುವ ಇಂಗ್ಲೀಷ್ 'ಕಾಗುಣಿತ'ದ ಜೇನುರಾಣಿ (Scripps National Spelling Bee) ಸ್ಪರ್ಧೆಯಲ್ಲಿ ಭಾರತೀಯ ಮಕ್ಕಳೇ ಪ್ರಥಮ ಬಹುಮಾನ ಪಡೆಯುತ್ತಾ ಬಂದಿರುವುದು ಹೆಮ್ಮೆಯ ಸಂಗತಿ. ಬಹುಮಾನದ ಮೊತ್ತ 40 ಸಾವಿರ ಡಾಲರ್ ಅಂದರೆ ಸುಮಾರು 22 ಲಕ್ಷ ರೂ. ಗಳು! ಈ ವರ್ಷದ ಬಹುಮಾನ ಪಡೆದ ಪ್ರತಿಭಾನ್ವಿತ ಭಾರತೀಯ ಹುಡುಗಿ San Diego ನಗರದ ನಿವಾಸಿ 14 ವರ್ಷದ ಸ್ನಿಗ್ಧಾ ನಂದಿಪತಿ. ಅವಳ ತಂದೆತಾಯಿ ಮೂಲತಃ ಆಂಧ್ರದವರು. ಇದೇ ಬಹುಮಾನವನ್ನು ಮೂರು ವರ್ಷಗಳ ಹಿಂದೆ ಪಡೆದ ಬಾಲಕಿ ಕರ್ನಾಟಕ ಮೂಲದ ಕಾವ್ಯಾ ಶಿವಶಂಕರ್. ಸತತವಾಗಿ ಕಳೆದ ಐದು ವರ್ಷಗಳಿಂದ ಭಾರತೀಯ ಸಂಜಾತ ಮಕ್ಕಳೇ ಈ ಪ್ರತಿಷ್ಠಿತ ಬಹುಮಾನವನ್ನು ಪಡೆಯುತ್ತಾ ಬಂದಿದ್ದಾರೆ. ಅವರಲ್ಲಿ ನಾಲ್ವರು ಬಾಲಕಿಯರು ಎಂಬುದು ಇಲ್ಲಿ ಗಮನಾರ್ಹ.

ಕಳೆದ ವಾರದ ಅಂಕಣದಲ್ಲಿ ಮುಳುಗುವ ಹಡಗಿನಿಂದ ಪಾರಾಗಲು ರಕ್ಷಣಾದೋಣಿಯನ್ನೇರಿಯೂ ಹೆಚ್ಚಿನ ಭಾರದಿಂದ ಅಪಾಯದ ಸ್ಥಿತಿಯಲ್ಲಿದ್ದ ಪ್ರಯಾಣಿಕರು ನಿಶ್ಶಕ್ತರೋಗಿಯನ್ನು ಸಮುದ್ರಕ್ಕೆ ತಳ್ಳಬೇಕೇ ಎಂದು ಕೇಳಿದ್ದು ನಿಮಗೆ ನೆನಪಿರಬಹುದು. ಆ ಪ್ರಶ್ನೆಗೆ ಕ್ಯಾಲಿಫೋರ್ನಿಯಾದ ಪುಟ್ಟ ಬಾಲಕಿ ಮೈತ್ರಿ ಕೊಟ್ಟ ಉತ್ತರ: "No, it is inhuman. Instead, someone should volunteer to die in order to save others!"

'ಜೈ ಭಾರತ ಜನನಿಯ ತನುಜಾತೇ!'

ನ್ಯೂಯಾರ್ಕ್/ಲಂಡನ್
19.7.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑